ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
ಸಿ.ಸಿ.**452/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಆದರ್ಶ್ ಎಂ.ಎಸ್. | ಫ್ರಾಸಾ-2 |
| ತಂದೆಯ ಹೆಸರು | : ಸ್ವಾಮಿಗೌಡ | ಚಾಸಾ-1 |
| ವಯಸ್ಸು | : 30 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿಎಸ್ಐ | ದಿನಾಂಕಃ15.07.2025. |
| ವಾಸಸ್ಥಳ | : ಕಡೂರು ಪಿಟಿಎಸ್. | |

:ಮುಖ್ಯ ವಿಚಾರಣೆಃ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:

ನಾನು ದಿ.04.06.2022 ರಿಂದ 31.01.2024 ರವರೆಗೂ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.28.06.2023 ರಂದು ಬೆ.8.20 ರ ಸಮಯಕ್ಕೆ ನಾನು ಚಾಸಾ-4 ರಿಂದ 7 ರವರೊಂದಿಗೆ ಮೂಡಿಗೆರೆ ಹ್ಯಾಂಡ್ ಪೋಸ್ಟ್ ಬಳಿ ಗಸ್ತು ಮಾಡುತಿದ್ದಾಗ ಬೆ.8.35 ರ ಸಮಯಕ್ಕೆ ಮುದ್ರೆ ಮನೆ ಕಾಫೀ ಕ್ಯೂರಿಂಗ್ ಬಳಿ ಬಸ್ ನಿಲ್ದಾಣದ ಪಕ್ಕ ಮರದ ಕೆಳಗೆ ಒಬ್ಬ ವ್ಯಕ್ತಿ ನಿಂತಿದ್ದು ಆತನ ಕೈಯಲ್ಲಿ ಹಳದಿ ಬಣ್ಣದ ಚೀಲ ಇದ್ದು ಆತ ಪೋಲೀಸ್ ಜೀಪ್ ಅನ್ನು ನೋಡಿದ ತಕ್ಷಣ ಗಾಬರಿಗೊಂಡು ಚೀಲವನ್ನು ಮರೆ ಮಾಚಲು ಪ್ರಯತ್ನಿಸಿದ್ದು ನಾನು ಜೀಪ್ ಅನ್ನು ನಿಲ್ಲಿಸಿ ಸಿಬ್ಬಂದಿಗಳೊಂದಿಗೆ ಆತನ ಬಳಿ ತೆರಳಿ ಆತನ ಹೆಸರು ವಿಳಾಸ ಕೇಳಿದೆವು. ಆ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯೇ ಆಗಿರುತ್ತಾನೆ. ಆರೋಪಿಯ ಕೈಯಲ್ಲಿದ್ದ ಚೀಲದ ಒಳಗೆ ಏನಿದೆ ಎಂದು ಕೇಳಿದಾಗ ಅದರಲ್ಲಿ ದನದ ಮಾಂಸ ಇದೆ ಎಂದು ಹೇಳಿದರು. ಚೀಲವನ್ನು ಪರಿಶೀಲಿಸಿದಾಗ ಅದರೊಳಗೆ 5 ಪ್ರತ್ಯೇಕ ಪ್ಲಾಸ್ಟಿಕ್ ಕವರ್ ನ ಪ್ಯಾಕೇಟ್ ಗಳು ಇತ್ತು. ಪ್ಯಾಕೇಟ್ ನೊಳಗೆ ಇರುವುದು ದನದ ಮಾಂಸ ಇರುವುದು ಎಂದು ಆರೋಪಿಯು ತಿಳಿಸಿದ ಮೇರೆಗೆ ನಾನು ಸ್ಥಳದಲ್ಲಿ ವರದಿಯನ್ನು ತಯಾರಿಸಿ ಅದನ್ನು ಚಾಸಾ-5 ರವರ ಹಸ್ತ ಬೆ.8.50 ರ ಸಮಯಕ್ಕೆ ಠಾಣೆಗೆ ಕಳುಹಿಸಿಕೊಟ್ಟು ಠಾಣೆಯಲ್ಲಿ ಪ್ರಕರಣ ದಾಖಲಾದ ಬಗ್ಗೆ ಮಾಹಿತಿ ಪಡೆದ ನಂತರ ಬೆ.9.05 ರ ಸಮಯಕ್ಕೆ ಸ್ಥಳದಲ್ಲಿ ಹಾಜರು ಸಿಕ್ಕ ಚಾಸಾ-2 ಮತ್ತು 3 ರವರನ್ನು ನಿಯಮಾನುಸಾರ ಪಂಚರನ್ನಾಗಿ ನೇಮಕ ಮಾಡಿಕೊಂಡೆವು.

ನಂತರ ಪಂಚರ ಸಮಕ್ಷಮ ಆರೋಪಿಯ ಬಳಿ ಇದ್ದ ಚೀಲವನ್ನು ಪರಿಶೀಲಿಸಿ ಅವುಗಳಲ್ಲಿದ್ದ ಪ್ಲಾಸ್ಟಿಕ್ ಕವರ್ ನ ಪೊಟ್ಟಣಗಳ ತೂಕ ನೋಡಿದಾಗ ಪ್ರತೀ ಪ್ಯಾಕೇಟ್ 2 ಕೆಜಿ ಯಂತೆ 5 ಪ್ಯಾಕೇಟ್ ಗಳ ತೂಕ 10 ಕೆ.ಜಿ ಇರುವುದು ಕಂಡು ಬಂತು. ನಂತರ ಸದರಿ ಪ್ಯಾಕೇಟ್ ಗಳನ್ನು ಅದೇ ಚೀಲಕ್ಕೆ ಹಾಕಿ ನಿಯಮಾನುಸಾರ ಸೀಲು ಮಾಡಿ ಬೆ.9.10 ರಿಂದ 10.10 ರವರೆಗೆ ಮಹಜರ್ ಕ್ರಮ ಜರುಗಿಸಿ ವಶಕ್ಕೆ ಪಡೆಯಲಾಯಿತು. ಮಹಜರ್ ಕಾಲಕ್ಕೆ ಚಾಸಾ-6 ರವರ ಮೊಬೈಲ್ ನಲ್ಲಿ ಪೋಟೋಗಳನ್ನು ತೆಗೆಯಲಾಗಿದೆ. ನಂತರ ಆರೋಪಿ ಮತ್ತು ಮಾಲಿನೊಂದಿಗೆ ಠಾಣೆಗೆ ಹಾಜರಾಗಿರುತ್ತೇವೆ. ಮುದ್ದೆಮಾಲನ್ನು ಠಾ.ಮಾ.ಸಂ.94/2023 ಕ್ಕೆ ಅಳವಡಿಸಿ ನ್ಯಾಯಾಲಯಕ್ಕೆ ಹಾಗೂ ಚಿಕ್ಕಮಗಳೂರು ಉಪವಿಭಾಗಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಆರೋಪಿಯನ್ನು ನಿಯಮಾನುಸಾರ ದಸ್ತಗಿರಿ ಮಾಡಿ ಠಾಣಾ ಸುರಕ್ಷತೆಯಲ್ಲಿ ಇರಿಸಿರುತ್ತೇನೆ. ವಶಪಡಿಸಿಕೊಂಡ ಮಾಂಸವನ್ನು ಪರಿಶೀಲಿಸಿ ಅಭಿಪ್ರಾಯ ನೀಡುವಂತೆ ಚಾಸಾ-8 ರವರ ಸಮಕ್ಷಮ ಮನವಿ ಪತ್ರದೊಂದಿಗೆ ಹಾಜರುಪಡಿಸಿ ಸದರಿರವರಿಂದ ವರದಿ, ತಜ್ಞರ ಪರೀಕ್ಷೆಗೆ ಪ್ರತ್ಯೇಕವಾಗಿ ಇರಿಸಿದ ಮಾದರಿ ಮಾಂಸ ಹಾಗೂ ಉಳಿದ ಮಾಂಸವನ್ನು

ಸ್ವೀಕರಿಸಿಕೊಂಡಿರುತ್ತೇನೆ. ಸದರಿ ಮಾದರಿ ಮಾಂಸವನ್ನು ಠಾ.ಮಾ.ಸಂ.96/2023 ಕ್ಕೆ ಅಳವಡಿಸಿ ಉಪವಿಭಾಗಾಧಿಕಾರಿಗಳ ಅನುಮತಿ ಪಡೆದಿರುತ್ತೇನೆ.

ಸದರಿ ಮಾದರಿ ಮಾಂಸವನ್ನು ಮನವಿ ಪತ್ರದೊಂದಿಗೆ ಚಾಸಾ-7 ರವರ ಹಸ್ತ ತಜ್ಞರ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ಮಾದರಿ ತೆಗೆದು ಉಳಿದ ಮಾಂಸದ ವಿಲೇವಾರಿಗೆ ಸಹಕರಿಸುವಂತೆ ಚಾಸಾ-10 ರವರಿಗೆ ಮನವಿ ಪತ್ರ ಸಲ್ಲಿಸಿಕೊಂಡು ಸದರಿ ರವರು ಚಾಸಾ-12 ರವರನ್ನು ಕಳುಹಿಸಿಕೊಟ್ಟ ಬಗ್ಗೆ ದೃಢೀಕರಣ ಪತ್ರ ಸ್ವೀಕರಿಸಿಕೊಂಡಿರುತ್ತೇನೆ. ನಂತರ ಸದರಿ ಉಳಿದ ಮಾಂಸವನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಬೀಜುವಳ್ಳಿಯ ಕಸ ವಿಲೇವಾರಿ ಘಟಕದಲ್ಲಿ ಚಾಸಾ-12 ರವರ ಸಹಾಯದಿಂದ ನಿಯಮಾನುಸಾರ ಸ.5.00 ರಿಂದ 6.30 ರವರೆಗೆ ವಿಲೇವಾರಿ ಮಾಡಿ ಮಹಜರ್ ಕ್ರಮ ಜರುಗಿಸಿ ಪೋಟೋ ತೆಗೆಸಿರುತ್ತೇನೆ. ನಂತರ ಆರೋಪಿಯ ಸ್ವ ಇಚ್ಛಾ ಹೇಳಿಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರುಮಾಡಿ ನ್ಯಾಯಾಲಯದ ಆದೇಶದಂತೆ ಚಾಸಾ-11 ಮತ್ತು 15 ರವರು ಆರೋಪಿಯನ್ನು ಜಿಲ್ಲಾ ಕಾರಗೃಹಕ್ಕೆ ಬಿಟ್ಟುಬಂದ ಬಗ್ಗೆ ಮಾಹಿತಿ ಪಡೆದಿರುತ್ತೇನೆ. ನಂತರ ಚಾಸಾ-2 ರಿಂದ 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡು ಪ್ರಕರಣದ ಕಡತವನ್ನು ಮುಂದಿನ ತನಿಖೆ ಸಂಬಂಧ ಚಾಸಾ-18 ರವರಿಗೆ ನೀಡಿರುತ್ತೇನೆ.

ಸಾಕ್ಷಿಯು ನಿಪಿ-1 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-2 ಮತ್ತು 3 ರ ಪೋಟೋಗಳನ್ನು ಸದರಿ ಮಹಜರ್ ಕಾಲಕ್ಕೆ ತೆಗೆದ ಬಗ್ಗೆ ಗುರುತಿಸುತ್ತಾರೆ. ನಿಪಿ-1 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.28.06.2023 ರ ವರದಿ, ಮಾಲುಪಟ್ಟಿ ಸಂ.94/2023, ಪಶುವೈದ್ಯಾಧಿಕಾರಿಗಳಿಗೆ ಬರೆದುಕೊಂಡ ಪತ್ರ, ಸದರಿರವರ ಪತ್ರ ಮತ್ತು ವರದಿ, ಪಿ.ಎಫ್.ಸಂ.96/2023, ಚಾಸಾ-10 ರವರಿಗೆ ಬರೆದುಕೊಂಡ ಪತ್ರ, ಚಾಸಾ-10 ರವರಿಂದ ಸ್ವೀಕರಿಸಿಕೊಂಡ ದೃಢೀಕರಣ, ಸ್ವತ್ತು ವಿಲೇವಾರಿ ಮಹಜರ್ ಮತ್ತು ಅದಕ್ಕೆ ಅಡಕಗೊಂಡ ಪೋಟೋ ಮತ್ತು ದಿ.28.06.2023 ರ ನಿವೇದನೆ ಪತ್ರವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-6 ರಿಂದ 16, ಸಾಕ್ಷಿಯ ಸಹಿಗಳನ್ನು ನಿಪಿ-6(ಎ) ರಿಂದ 14(ಎ) ಮತ್ತು 16(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಜಿ.ಎ ವಕೀಲರಿಂದಃ</u>

ದಿ.28.06.2023 ರಂದು ಬೆ.7.00 ಗಂಟೆ ಸಮಯಕ್ಕೆ ಠಾಣೆಗೆ ಹಾಜರಾಗಿದ್ದೆ. ಆ ದಿನ ಮೂಡಿಗೆರೆ ಪಟ್ಟಣದಲ್ಲಿ ಗಸ್ತು ಮಾಡಿದ್ದೇವೆ. ಹ್ಯಾಂಡ್ ಪೋಸ್ಟ್ ಬಳಿ ತಲುಪಿದಾಗ ಬೆ.8.15 ರ ಸಮಯವಾಗಿತ್ತು. ಬೇರೊಂದು ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ನಾವು ಗಸ್ತು ಮಾಡುತ್ತಿರಲಿಲ್ಲ. ಮುತ್ತಿಗೆಪುರ ಬಸ್ ನಿಲ್ದಾಣದ ಬಳಿ ಮೂಡಿಗೆರೆ ಪೋಲಿಸ್ ಠಾಣಾ ಮುಕ್ತಾಯವಾಗುವ ಬಗ್ಗೆ ಹಾಗೂ ಗೋಣೀಬೀಡು ಪೋಲಿಸ್ ಠಾಣಾ ವ್ಯಾಪ್ತಿ ಪ್ರಾರಂಭವಾಗುವ ಬೋರ್ಡ್ ಇದೆ ಎಂದರೆ ಸರಿ. ಚಾಸಾ-2 ಮತ್ತು 3 ರವರು ಭಜರಂಗದಳಕ್ಕೆ ಸೇರಿದವರು ಎಂದರೆ ನನಗೆ ಗೊತ್ತಿಲ್ಲ. ಅವರನ್ನು ಹಲವಾರು ಪ್ರಕರಣಗಳಲ್ಲಿ ಸಾಕ್ಷಿದಾರರನ್ನಾಗಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅವರಿಗೆ ನೋಟೀಸು ಕೊಟ್ಟಿದ್ದೆ.

ಅವರಿಗೆ ನೋಟೀಸು ಕೊಟ್ಟಾಗ ಬೆಳಗ್ಗೆ ಸುಮಾರು 8.50 ರ ಸಮಯವಾಗಿರಬಹುದು. ನಿಪಿ-6 ರಲ್ಲಿ ತಿದ್ದುಪಡಿಗಳು ಇವೆ ಎಂದರೆ ಸರಿಯಲ್ಲ.

ನನಗೆ ಹಿಂದಿ ಭಾಷೆ ಸ್ವಲ್ಪ ಬರುತ್ತದೆ. ಆರೋಪಿಯ ಕನ್ನಡದಲ್ಲೇ ಉತ್ತರಿಸಿದ್ದಾರೆ. ನಾವು ಹಾಜರುಪಡಿಸಿದ ಮಾಂಸ ದನದ ಮಾಂಸ ಎಂದು ಚಾಸಾ-8 ರವರ ವರದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲದಲ್ಲಿ ಮುತ್ತಿಗೆಪುರದ ಶಂಕರೇಗೌಡರವರನ್ನು ಆರೋಪಿಯ ಬಗ್ಗೆ ವಿಚಾರಿಸಿಲ್ಲ. ಆರೋಪಿಯು ಕಾಡುಜಾತಿಯ ಮರದ ಕೆಳಗೆ ನಿಂತಿದ್ದರು ಎಂದು ನಮೂದಿಸಲಾಗಿದೆ. ಠಾಣೆಯಲ್ಲಿ ಪ್ರಕರಣದ ದಾಖಲಾದ ಬಗ್ಗೆ ಬೆ.9.00 ಗಂಟೆಗೆ ಮಾಹಿತಿ ಬಂದಿತ್ತು. ಆರೋಪಿಯು ಯಾವುದೋ ಒಬ್ಬ ವ್ಯಕ್ತಿಯಿಂದ ಮಾಂಸ ಖರೀದಿಸಿ ತಂದಿರುವುದಾಗಿ ಹೇಳಿದ್ದು, ಸದರಿರವರ ಹೆಸರು ಮತ್ತು ಖರೀದಿ ಸ್ಥಳವನ್ನು ಹೇಳಿಲ್ಲ. ನಿಪಿ-2 ರಲ್ಲಿ ಯಾವುದೇ ಮನೆ ಮತ್ತು ಖಾಲಿ ಜಾಗ ಕಾಣುತ್ತಿಲ್ಲ ಎಂದರೆ ಸರಿ. ಸದರಿ ಸ್ಥಳದಲ್ಲಿ ಕಾಣುವ ತೋಟ ಪೂರ್ಣೇಶ್ ರವರಿಗೆ ಸೇರಿದ್ದು. ಸ್ಥಳದ ಉತ್ತರ ದಿಕ್ಕಿಗೆ ಸದರಿ ತೋಟ ಇತ್ತು. ಸ್ಥಳದ ಪೂರ್ವ, ಪಶ್ಚಿಮ  ಮತ್ತು ದಕ್ಷಿಣಕ್ಕೆ ರಸ್ತೆ ಇತ್ತು ಎಂದರೆ ಸರಿ. ಇದೇ ವಿಚಾರವನ್ನು ಮಹಜರ್ ನಲ್ಲಿ ನಮೂದಿಸಿದ್ದೇವೆ. ಮಹಜರ್ ನ್ನು ಚಾಸಾ-6 ರವರು ಬರೆದಿದ್ದಾರೆ.

ನಾನು ಹೇಳಿದಂತೆ ಯಾವುದೇ ಮಾದರಿ ಮಾಂಸವನ್ನು ತಜ್ಞರ ಪರೀಕ್ಷೆಗೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಬಕ್ರೀದ್ ಹಬ್ಬ ಇತ್ತು ಎಂದು ಮಹಜರ್ ನಲ್ಲಿ ದಿನಾಂಕವನ್ನು ನಮೂದಿಸಿಲ್ಲ. ನಾನು ಹೇಳಿದಂತೆ ಯಾವುದೇ ದಾಳಿ ಮಾಡಿಲ್ಲ ಹಾಗೂ ಯಾವುದೇ ವಸ್ತುವನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಇಲಾಖಾ ಅಂಕಿಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಪತ್ರ ವ್ಯವಹಾರ ಮಾಡಿಲ್ಲ ಹಾಗೂ ಯಾವುದೇ ದಾಖಲೆ ಮತ್ತು ವರದಿಗಳನ್ನು ಸ್ವೀಕರಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಗುರುತಿಸಿರುವ ಎಲ್ಲಾ ದಾಖಲೆಗಳನ್ನು ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.